**<u>ದಿನಾಂಕಃ 15-09-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಶ್ರೀ ಎಸ್.ಎಲ್.ಎಸ್., ಆರೋಪಿ ಪರ ವಕೀಲರಿಂದಃ</u>**

**1.** ನನಗೆ ಕನ್ನಡ ಇಂಗ್ಲೀಷ ಓದಲು ಬರೆಯಲು ಬರುತ್ತದೆ. ನಾನು ಬಿ.ಕಾಂ. ಪದವೀದರ ಇರುತ್ತೇನೆ. ದೂರಿನಲ್ಲಿ ನನಗೆ ಮೂಲ ದೂರುದಾರ ಹಾಗೂ ಆರೋಪಿಯ ಮಧ್ಯ ಪ್ರಕರಣದ ಬಗ್ಗೆ ನಡೆದ ವ್ಯವಹಾರದ ಕುರಿತು ಮಾಹಿತಿ ಇರುತ್ತದೆ ಅಂತಾ ಕೇಳಿದ ಪ್ರಶ್ನೆಗೆ, **ಸಾಕ್ಷಿಯು ಉತ್ತರಿಸಿರುವುದಿಲ್ಲ.**

**2.** ನಿಂಬಾ ಮೋಟರ್ಸ ಇದು ಪಾಲುದಾರಿಕೆ ವ್ಯವಹಾರ ಹೊಂದಿರುತ್ತದೆ. ಸದರಿ ವ್ಯವಹಾರದಲ್ಲಿ 3 ಜನ ಪಾಲುದಾರರು ಇರುತ್ತಾರೆ, ಅವರೆಂದರೆ ಮುರಗೇಶ ಬೇವಿನಮರದ, ಲೀಲಾವತಿ ಬೇವಿನಮರದ ಮತ್ತು ಅಶೋಕ ಬೇವಿನಮರದ ಅಂತಾ ಇರುತ್ತಾರೆ. ಸದರಿ ವ್ಯವಹಾರದಲ್ಲಿ ಲೀಲಾವತಿ ಇವರು Sleeping Partner ಇರುತ್ತಾರೆ. ಮುರಗೇಶ ಹಾಗೂ ಅಶೋಕ ಇವರು ಸಕ್ರಿಯ ಪಾಲುದಾರರು ಇರುತ್ತಾರೆ. ಅಶೋಕ ಇವರು ದಿನಾಂಕಃ 16-03-2021 ರಂದು ತೀರಿಕೊಂಡಿರುತ್ತಾರೆ.

**3.** ಸದರಿ ಪ್ರಕರಣದಲ್ಲಿ ನಾನು ನೋಟಿಸ್‌ನ್ನು ನೀಡಿಲ್ಲ ಅಂದರೆ ಸಾಕ್ಷಿ ಮುರಗೇಶ ಇವರು ನೀಡಿರುತ್ತಾರೆ ಅಂತಾ ಹೇಳುತ್ತಾರೆ. ಆರೋಪಿಗೆ ನೀಡಿದ ನೋಟಿಸ್‌ನಲ್ಲಿ ಮೂಲ ದೂರುದಾರ ಮುರಗೇಶ ಇವರು ಏನೂ ಮಾಹಿತಿ ನೀಡಿರುತ್ತಾರೆ ಅಂತಾ ನನಗೆ ಗೊತ್ತಿಲ್ಲ.

4. ದೂರಿನಲ್ಲಿ ನಿಂಬಾ ಮೋಟರ್ಸನ್ನು ದೂರುದಾರ ಅಂತಾ ತೋರಿಸಿಲ್ಲ ಅಂದರೆ ಹೌದು. ಅದೇ ರೀತಿ ಎಲ್ಲಾ ಪಾಲುದಾರರ ಹೆಸರನ್ನು ದೂರಿನಲ್ಲಿ ತೋರಿಸಿಲ್ಲ ಅಂದರೆ ಸರಿ. ಸಾಕ್ಷಿಯು ಶಿರೋನಾಮೆಯಲ್ಲಿ ತೋರಿಸಿಲ್ಲ ಅಂತಾ

ನುಡಿಯುತ್ತಾರೆ. ಮುರಗೇಶ ಬೇವಿನಮರದ ಇವರು ನನಗೆ ನಿಪಿ-1 ರ ದಾಖಲೆಯನ್ನು ಬರೆದುಕೊಡುವ ಕಾಲಕ್ಕೆ ನಡೆಸುತ್ತಿದ್ದ ವ್ಯವಹಾರಗಳನ್ನೇ ಈಗಲೂ ನಡೆಸುತ್ತಿದ್ದಾರೆ ಅಂದರೆ ಸಾಕ್ಷಿ ಈಗ ವ್ಯಾಪಾರ ಬೆಳೆದಿರುತ್ತದೆ ಅಂತಾ ಹೇಳುತ್ತಾರೆ.

**5.** ನಿಪಿ-2 ರ ಚೆಕ್‌ನಲ್ಲಿ "NIMBA MOTORS” ಎಂಬ ಹೆಸರಿಗೆ ಚೆಕ್‌ನ್ನು ನೀಡಲಾಗಿದೆ ಅಂದರೆ ಸರಿ. ಸದರಿ ದೂರನ್ನು ಮುರಗೇಶ ಬೇವಿನಮರದ ಇವರು ನೀಡಿದ ಮುಕ್ತೇಯಾರ ಪತ್ರದ ಆಧಾರದ ಮೇಲೆ ಸಲ್ಲಿಸಿರುತ್ತೇನೆ ಅಂದರೆ ಸರಿ. ನನಗೆ ದೂರಿನ ಶಿರೋನಾಮೆಯಲ್ಲಿ ಪಾಲುದಾರಿಕೆ ಸಂಸ್ಥೆ ಹಾಗೂ ಅದರ ಎಲ್ಲಾ ಪಾಲುದಾರರನ್ನು ದೂರುದಾರ ಅಂತಾ ತೋರಿಸಲು ಯಾವುದೇ ತೊಂದರೆ ಇರಲಿಲ್ಲ.

**6.** ಆರೋಪಿಗೆ ನೀಡಿದ ನೋಟಿಸ್‌ನ್ನು ಮುರಗೇಶ ಇವರ ಪರವಾಗಿ ನೀಡಲಾಗಿದೆ ಅಥವಾ ಪಾಲುದಾರಿಕೆ ಸಂಸ್ಥೆಯ ಪರವಾಗಿ ನೀಡಲಾಗಿದೆ ಅಂತಾ ಗೊತ್ತಿಲ್ಲ. ನಿಪಿ-4 ನೋಟಿಸಲ್ಲಿ ಮುರಗೇಶ ಅಶೋಕ ಬೇವಿಮರದ ನಿಂಬಾ ಮೋಟರ್ಸ ಪಾಲುದಾರರ ಪರವಾಗಿ ಅಂತಾ ಒಬ್ಬರೇ ನೋಟಸ್ ನೀಡಿರುತ್ತಾರೆ ಅಂದರೆ ಸರಿ. ದಿನಾಂಕಃ 04-05-2021 ರಂದು ಆರೋಪಿಗೆ ನೋಟಿಸ್ ನೀಡುವ ಕಾಲಕ್ಕೆ ಅಶೋಕ ಬೇವಿನಮರದ ತೀರಿಕೊಂಡಿದ್ದರು ಅಂದರೆ ಸರಿ. ಲೀಲಾವತಿ ಬೇವಿನಮರದ ಜೀವಂತ ಇರುತ್ತಾರೆ.

**7.** ನಾನು ಜನೇವರಿ 2019 ರಿಂದ ಇಲ್ಲಿಯವರೆಗೆ ನಿಂಬಾ ಮೋಟರ್ಸನಲ್ಲಿ ಕೆಲಸ ಮಾಡುತ್ತಿದ್ದೇನೆ. ನಾನು ನಿಂಬಾ ಮೋಟರ್ಸ ಸಂಸ್ಥೆಯ ವಿವಿಧ ಅಂಗ ಸಂಸ್ಥೆಗಳಲ್ಲಿ ಲೆಕ್ಕ ಪರಿಶೋದಕ ಅಂತಾ ಕೆಲಸ ಮಾಡುತ್ತಿದ್ದೇನೆ. ನನಗೆ ದೂರುದಾರ ಮತ್ತು ಆರೋಪಿಯ ಮಧ್ಯ ನಡೆದಿದೇ ಎನ್ನಲಾದ ವೈಯಕ್ತಿಕ ವ್ಯವಹಾರದ ಬಗ್ಗೆ ಗೊತ್ತಿಲ್ಲ, ಆದರೆ ಆ ಬಗ್ಗೆ

ದಾಖಲೆಗಳನ್ನು ನೋಡಿರುತ್ತೇನೆ. ನನಗೆ ದೂರುದಾರ ದಾಖಲೆ ನೋಡಿದಾಗ ಹೇಳಿರುತ್ತಾರೆ. ನಾನು ದೂರುದಾರ ಹಾಗೂ ಆರೋಪಿಯ ಮಧ್ಯ ನಡೆದಿದೇ ಎನ್ನಲಾದ ವ್ಯವಹಾರದ ಬಗ್ಗೆ ದಿನಾಂಕಃ 30-03-2019 ರ ಸಿಸ್ಟಂ ಕ್ಯಾಶ ಬುಕ್ ನೋಡಿರುತ್ತೇನೆ. ಸಿಸ್ಟಂ ಕ್ಯಾಶ ಬುಕ್ ಇದು ಕಂಪ್ಯೂಟರ್ನಲ್ಲಿ ಇರುತ್ತದೆ ಹಾಗೂ ಅದನ್ನು ಲೇಖಿಯಲ್ಲಿ ಸಹ ಬರೆದಿರುತ್ತೇವೆ. ಸಿಸ್ಟಂ ಕ್ಯಾಶಬುಕ್‌ನಲ್ಲಿ ಬೇಕಾದಾಗ ಬದಲಾವಣೆಯನ್ನು ಮಾಡಬಹುದು ಅಂದರೆ ಸಾಕ್ಷಿ ಆರ್ಥಿಕ ವರ್ಷ ಮುಗಿದ ನಂತರ ಅಡಿಟ್ ಆಗುವುದರಿಂದ ಬದಲಾವಣೆ ಮಾಡಲು ಬರುವುದಿಲ್ಲ ಅಂತಾ ಹೇಳುತ್ತಾರೆ. ಅಡಿಟ್ ಮಾಡುವ ಮುಂಚೆ ಬದಲಾವಣೆ ಮಾಡಬಹುದು ಅಂದರೆ ಸಾಕ್ಷಿ ಒಂದು ಬಾರಿ ಡೇಟ್ ಹೋದರೆ ಮಾಡಲು ಬರುವುದಿಲ್ಲ ಅಂತಾ ಹೇಳುತ್ತಾರೆ. ಈಗ ನಡೆದಿದೇ ಎನ್ನಲಾದ ವ್ಯವಹಾರದ ಬಗ್ಗೆ 2019-2020,2020-2021 ರ ಅಡಿಟ್‌ನಲ್ಲಿ ತೋರಿಸಿರುತ್ತೇವೆ. ನಾನು 2019-2020, 2020-2021 ನೇ ಸಾಲಿನ ಅಡಿಟ್‌ಬುಕ್ ಹಾಜರಪಡಿಸಿಲ್ಲ, ಬೇಕಾದರೆ ಹಾಜರಪಡಿಸುತ್ತೇನೆ.

(ಪಾಟೀ ಸವಾಲು ಮಾಡಲು ಆರೋಪಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

-ಸಹಿ- **15-09-2023.**

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.